ವ್ಯವಸ್ಥೆ ಮಾಡಬೇಕಾಗುತ್ತದೆ. ಆ ಪರಿಸ್ಥಿತಿ ಇರುವುದು ನಿಜ. ಅದಕ್ಕೆ ಸರಿಯಾದ ವ್ಯವಸ್ಥೆಯನ್ನು ಕಾಲಕ್ರಮೇಣ ಮಾಡುತ್ತೇವೆ.

ಶ್ರೀ ಎನ್. ರಾಜಣ್ಣ: ಬಾಣಸವಾಡಿ ಹೊಸ ಬಡಾವಣೆ, ಅಲ್ಲಿಗೆ ಹೆಚ್ಚಿನ ಬಸ್ಸುಗಳ ವ್ಯವಸ್ಥೆಯನ್ನು ದಯಮಾಡಿ ಮಾಡಬೇಕು.

ಅಧ್ಯಕ್ಷರು: ಇದು ಕರ್ನಾಟಕ ವಿಧಾನಸಭೆ, ಬೆಂಗಳೂರು ನಗರಸಭೆಯಲ್ಲ.

ಶ್ರೀ ಎನ್. ರಾಜಣ್ಣ: ಅಧ್ಯಕ್ಷರೇ, Travellers find it difficult. Sitting travellers, standing travellers, foot-board travellers and hanging travellers; they are all finding it difficult.

ಅಧ್ಯಕ್ಷರು: ಆಗಲಿ, ಅದಕ್ಕೆ ವ್ಯವಸ್ಥೆ ಮಾಡುತ್ತಾರೆ.

ಗಂಗಾನಗರದಲ್ಲಿ ಒಂದು ಬಸ್ಸು ಡಿಪೋ

131- ಶ್ರೀ ಆರ್. ಕೃಷ್ಣಪ್ಪ (ಜಯಮಹಲ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ನಗರ ಸಾರಿಗೆ ಬಸ್ ಡಿಪೋಗಳ ಒಟ್ಟು ಸಂಖ್ಯೆ ಎಷ್ಟು?

ಆ) ಬೆಂಗಳೂರು ಗಂಗಾನಗರದಲ್ಲಿ ಬಸ್ ಡಿಪೋ ಸ್ಥಾಪಿಸಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಗಂಗಾನಗರದಲ್ಲಿ ಬಸ್ ಡಿಪೋ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು):

ಅ) ಬೆಂಗಳೂರು ನಗರದಲ್ಲಿ ನಗರ ಸಾರಿಗೆಯ (ಹದಿಮೂರು) 13 ಬಸ್ ಡಿಪೋಗಳಿವೆ.

ಆ) ಇಲ್ಲ

ಇ) ಸಧ್ಯಕ್ಕೆ ಅದರ ಪ್ರಸ್ತಾಪವಿಲ್ಲ.

ಶ್ರೀ ಆರ್. ಕೃಷ್ಣಪ್ಪ: ಸನ್ಮಾನ್ಯ ಅಧ್ಯಕ್ಷರೆ, ಗಂಗಾನಗರದಲ್ಲಿ ಎರಡು ಎಕರೆ ಭೂಮಿಯನ್ನು ಸಾರಿಗೆ ನಿಗಮಕ್ಕೆ 1987ರಲ್ಲಿ ಕೊಟ್ಟಿದ್ದು, ಅಲ್ಲಿ ಬಸ್ ಡಿಪೋ ಅಥವಾ ಬಸ್ ಸ್ಟ್ಯಾಂಡ್ ಮಾಡುತ್ತೇವೆಂದು ತೆಗೆದುಕೊಂಡರು. ಅಲ್ಲಿ ಇದುವರೆಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆರ್.ಟಿ.ನಗರ, ಸದಾಶಿವನಗರ ಪ್ರದೇಶ ಇವೆಲ್ಲವು ಅದರ ಸುತ್ತಲೂ ಸೇರಿಕೊಂಡಿದೆ, ಅದನ್ನು ಬೇಗ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಂಡು ಅವರಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಕೆ.ಎಸ್. ಬೀಳಗಿ:- ಸನ್ಮಾನ್ಯ ಅಧ್ಯಕ್ಷರೆ, ಅವರು ಹೊಸದಾಗಿ ಪ್ರಶ್ನೆಯನ್ನು ಕೇಳಿದ್ದಾರೆ, ಅವರೇನು ಈಗ ಸ್ಥಳದ ಬಗ್ಗೆ ಹೇಳಿದ್ದಾರೆ, ಅದರ ಅವಶ್ಯಕತೆ ಇದ್ದರೆ ಮುಂದಿನ ಬಜೆಟ್‌ನಲ್ಲಿ ಅದನ್ನು ಮಾಡುತ್ತೇವೆ.

ಶ್ರೀ ಆರ್. ಕೃಷ್ಣಪ್ಪ: ಸ್ಥಳವನ್ನು ಈಗಾಗಲೇ ಕೊಟ್ಟಿದ್ದೇವೆ.